**ಗ್ರಾಮೀಣ ಪ್ರದೇಶಗಳ ಪ್ರತಿ ಠಾಣೆಯಲ್ಲೂ ಒಂದು ಶ್ವಾನವಿರುತ್ತದೆ. ಠಾಣೆಗೆ ಬಂದವರನ್ನು ತನ್ನದೇ ರೀತಿಯಲ್ಲಿ ಬರಮಾಡಿಕೊಳ್ಳುತ್ತದೆ. ಬಂದವನು ಸಭ್ಯನೋ ಅಥವಾ ಕ್ರಿಮಿನಲ್ಲೋ ಎಂದು ಕಣ್ಣಿನಲ್ಲೇ ಅಳೆಯುವ ಕುಶಾಗ್ರಮತಿಗಳೂ ಇವೆ.**

ಮಾಡಿದ್ದಿದೆ. ಕೆಲವೊಮ್ಮೆ ತೀರ ಜಿದ್ದಿಗೆ ಬಿದ್ದು ಬಂಪರನ್ನು ಅವುಗಳ ಪೃಷ್ಠ ಭಾಗಕ್ಕೆ ಮೆಲುವಾಗಿ 'ಟಚ್' ಮಾಡಿಯೂ ನೋಡಿದ್ದೇನೆ. ಊಹೂಂ, ಅವುಗಳ ಧೈರ್ಯವೇ ಧೈರ್ಯ... ಒಂದೆರೆಡು ಬಾರಿ ನನ್ನ ಮುಖ ನೋಡಿ ಗುರುತು ಮಾಡಿಕೊಂಡುಬಿಟ್ಟವೆ. 'ಏನಾದರೂ ಮಾಡಿಕೋ ಹೋಗು... ಎಲ್ಲಾ ಮಾಫ್...' ಎಂದು ಕ್ಷಮಿಸಿ ದೊಡ್ಡತನ ಮೆರೆದು ನನ್ನನ್ನು ಕುಬ್ಜನನ್ನಾಗಿ ಮಾಡಿವೆ. ಆ ಮೂಲಕ ನಾನೇ ತಪ್ಪು ಮಾಡಿದ್ದೇನೋ ಎಂಬ ಭಾವ ಮೂಡುವಂತೆ ಮಾಡಿವೆ.

ಈ ಗ್ರಾಮಸಿಂಹಗಳ ಊಹೂಂ... ನಗರಸಿಂಹಗಳ ಸಾಹಸಗಾಥೆ ಇಷ್ಟಕ್ಕೆ ಮುಗಿಯುವುದಿಲ್ಲ. ರಸ್ತೆಯಲ್ಲಿ ಮೈಚಾಚಿ ಮಲಗಿದವೆಂದರೆ ಎಂಥ ಬುಲ್ಡೋಜರಿನ ಟೈರುಗಳು ಪಕ್ಕದಲ್ಲಿಯೇ ಹಾಯ್ದರೂ ಡೋಂಟ್ ಕೇರ್... ಒಮ್ಮೆ ಕುಂತಲ್ಲಿಯೇ ತಣ್ಣನೆಯ ದೃಷ್ಟಿಯನ್ನು ಗಾಡಿ ಮಾಲೀಕನತ್ತ ಬೀರಿದವೆಂದರೆ ಆತ ಎಸಿ ವಾಹನದೊಳಗಿನಿಂದಲೇ ಗಡಗಡನೆ ಬೆವರುತ್ತಾನೆ. ಅಷ್ಟು ಭಯವನ್ನು ಅವು ಮಡಗಿವೆ.

ನಮ್ಮ ಒರಿಜಿನಲ್ ಗ್ರಾಮಸಿಂಹಗಳು ಹೀಗಲ್ಲ. ಆರು ತಿಂಗಳಿಗೊಮ್ಮೆ ಊರಿಗೆ ಹೋಗುತ್ತೇನಾದ್ದರಿಂದ ಈ ವ್ಯತ್ಯಾಸ ನನಗೆ ಗೊತ್ತಿದೆ. ಸದಾ ಸ್ನೇಹಕ್ಕಾಗಿ ಹಾತೊರೆಯುವ ಅವು ದೂರದಿಂದಲೇ ನುಲಿಯುತ್ತವೆ. ಹೊಸಬರು ಕಂಡೊಡನೆ ತಮ್ಮ ಬಾಲವನ್ನು ಬಿರುಸಾಗಿ ಅಲ್ಲಾಡಿಸುತ್ತಾ ಬಳಿಗೇ ಬಂದು ನಿಲ್ಲುತ್ತವೆ. ಪ್ಯಾಂಟು ಬೂಟುಗಳನ್ನು ಮೂಸುತ್ತವೆ. ಕಾಲುಗಳ ಮಧ್ಯೆ ನುಸುಳಿ ಸ್ನೇಹ ಹಸ್ತ ಚಾಚುತ್ತವೆ. ಎದುರಿನವನ ಪ್ರತಿಕ್ರಿಯೆ ಏನು ಅಂತ ಮುಖ ನೋಡುತ್ತವೆ. ಕೊಂಚ ಪಾಸಿಟಿವ್ ಸಿಗ್ನಲು ತೋರಿಸಿದರೂ ಕಾಲು ಸಂದಿಯೊಳಗಿನಿಂದ ನುಸುನುಸುಳಿ ಕುಂಯ್... ಗುಟ್ಟುತ್ತಾ ಪ್ರೇಮ ಪ್ರಕಟಿಸುತ್ತವೆ. ಒಂದು ವೇಳೆ ಅವರು ಹಛಾ... ಅಂತ ಗದರಿದರೆಂದರೆ 'ಓ... ಇವನಿಗೇಕೋ ನಮ್ಮ ಮೇಲೆ ಆಸಕ್ತಿಯಿಲ್ಲ' ಎಂಬುದನ್ನು ಅರ್ಥ ಮಾಡಿಕೊಳ್ಳುತ್ತವೆ. ಆದರೂ ಮನುಷ್ಯನನ್ನು ಕಳೆದುಕೊಳ್ಳುವುದೇಕೆಂದು ದೂರದಿಂದಲೇ ಮತ್ತೆ ಮುಖ ನೋಡಿಕೊಂಡು ಮತ್ತೆ ಕರೆದಾನೇನೋ ಎಂದು ಕಾದು ನಿಲ್ಲುತ್ತವೆ.

ನಿಯತ್ತಿನ ಪ್ರಾಣಿ ನಾಯಿ ಎಂದು ನಾವು ಚಿಕ್ಕವರಿಂದಲೂ ಓದುತ್ತಾ ಬೆಳೆದವರು. ಅವೂ ಕೂಡ ತೀರ ಇತ್ತೀಚಿನವರೆಗೆ ತಮ್ಮ ಹೆಸರಿಗೆ ಮಸಿ ತಗುಲದಂತೆ ಜಾಗ್ರತೆಯಾಗೇ ಇದ್ದವು. ಆದರೆ, ಕಾಲ ಬದಲಾದಂತೆ ಮನುಷ್ಯ ಜಾತಿಯ ಗುಣಸ್ವಭಾವ ಕೆಟ್ಟು ಕೆರ ಹಿಡಿಯಿತು. ತನ್ನ ಸುತ್ತ ಮುತ್ತಲಿದ್ದವರನ್ನೇ ಆತ ತುಳಿಯಲಾರಂಭಿಸಿದ. ನಂಬಿಕೆ, ವಿಶ್ವಾಸಗಳೆನ್ನುವ ಪದಗಳಿಗೆ ಕನಿಷ್ಠ ಡಿಕ್ಷನರಿಯಲ್ಲೂ ಜಾಗ ಕೊಡಲಿಲ್ಲ. ಇಂಥ ನರಪ್ರಾಣಿ ಹಾಗೂ ಅವನು ತೋರುತ್ತಿದ್ದ ಅರೆಪಾವಿನಷ್ಟು ಪ್ರೀತಿಯನ್ನೇ ನಂಬಿ ಬಾಲವಲ್ಲಾಡಿಸಿಕೊಂಡು ಕುಳಿತಿದ್ದ ನಾಯಿಗಳೂ ಪರಿಸ್ಥಿತಿಗೆ ತಕ್ಕಂತೆ ಬದಲಾದವು.

ಹಿಂದಿನ ಕಾಲದಲ್ಲಿ ಪ್ರತಿಯೊಬ್ಬರೂ ನಾಯಿಗಳನ್ನು ತಮ್ಮ ಮನೆ ಸದಸ್ಯನೇನೋ ಅನ್ನುವಂತೆ